ಅಧ್ಯಕ್ಷರು.—ಆದಷ್ಟೂ ಮಟ್ಟಿಗೆ ವಿಶ್ವ ಪ್ರಯತ್ನ ಮಾಡಿ ಅಜೆಂಡಾದಲ್ಲಿ ಏನಿದೆ ಅದನ್ನೆಲ್ಲಾ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಂಪಾಪತಿ.—ಇದರಲ್ಲಿ ವಿಶ್ವ ಪ್ರಯತ್ನ ಏನಿದೆ, ಇದು ಬಡವರ ವಿಚಾರ.

ಅಧ್ಯಕ್ಷರು.—ನೋಡಿ. ನೀವು ಸದನದ ಸಮಯವನ್ನು ಹಾಳು ಮಾಡುತ್ತಿದ್ದೀರಿ. ಬಡವರ ಬಗ್ಗೆ ನಿಮಗಿಂತ ಹೆಚ್ಚಾಗಿ ನಮಗೆ ಅನುಕಂಪ ಇದೆ. ನಿಮ್ಮೊಬ್ಬರಿಗೇ ಇಲ್ಲ. ಎಲ್ಲರಿಗೂ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಎಷ್ಟು ಹೊತ್ತಾದರೂ ಮುಗಿಸಿಕೊಡುತ್ತೇನೆ ಎಂದು ಹೇಳಿದಿರಿ. ಈಗ ವಿಶ್ವ ಪ್ರಯತ್ನ ಮಾಡುತ್ತೇನೆ ಎಂದು ಹೇಳುವುದನ್ನು ನೋಡಿದರೆ ಆದರೆ ಆಗಲಿ, ಇಲ್ಲದೇ ಹೋದರೆ ಹೋಗಲಿ ಎಂದು ಆಗುತ್ತದೆ. ತಾವು ಡೆಫಿನೆಟ್ ಆಗಿ ಇವತ್ತು ತೆಗೆದುಕೊಳ್ಳುತ್ತೇವೆಂದು ಅಷ್ಯೂರೆನ್ಸ್ ಕೊಡಬೇಕು. ಆ ರೀತಿ ಹೇಳದೇ ಹೋದರೆ ನಾವು ಬಿಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ನೋಡಿ, ನೀವು ಈಗ ೨೦ ನಿಮಿಷ ಟೈಮ್ ಹಾಳು ಮಾಡಿರುತ್ತೀರಿ. ಇದು ಸರಿಯಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.—ಕೆಲವು ಸಲ ಎರಡು ಗಂಟೆ ನಾಲ್ಕು ಗಂಟೆ ಹಾಳಾಗುವುದು ಗೊತ್ತಿಲ್ಲವೇ? ಬಡವರ ಬಗ್ಗೆ ೨೦ ನಿಮಿಷ ಸಮಯ ಬಹಳ ದೊಡ್ಡದೇನಲ್ಲ.

ಅಧ್ಯಕ್ಷರು.—ಈಗ ಕಾಲಿಂಗ್ ಅಟೆನ್ಶನ್ಸ್, ಅಜೆಂಡಾ ಪಟ್ಟಿಯಲ್ಲಿ ಒನೆಯವರ ಬಗ್ಗೆ ರಮಾನಾಥರೈ ಅವರು ಗಮನ ಸೆಳೆಯಬಹುದು. ಜೆ.ಹೆಚ್. ಪಟೇಲರು ಉತ್ತರ ಕೊಡುತ್ತಾರೆ.

ಗಮನ ಸೆಳೆಯೆಂಬ ಸೂಚನೆ

೯-೩೦ ಎ. ಎಂ.

ದಕ್ಷಿಣ ಕನ್ನಡ ಜಿಲ್ಲೆಯ ಭೂರಹಿತ ಕೃಷಿ ಮತ್ತು ಬಡವರಿಗೆ ಈ ಹಿಂದೆ ಕೊಡಲ್ಪಟ್ಟ ೦.೦೫ ಸೆಂಟ್ಸ್ ಮನೆ ನಿವೇಶನಕ್ಕೆ ಸ್ಥಳ ಮೌಲ್ಯ ನಿರ್ಧರಿಸಿ ವಸೂಲಿ ಮಾಡುತ್ತಿರುವುದು

(ಶ್ರೀ ಬಿ. ರಮಾನಾಥರೈರವರ ಪರವಾಗಿ ಶ್ರೀ ಬಿ. ಎ. ಉಮರಬ್ಬನವರು ಮಂತ್ರಿಗಳ ಗಮನ ಸೆಳೆದರು)

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಭೂರಹಿತ ಕೃಷಿ ಮತ್ತು ಬಡವರಿಗೆ ಈ ಹಿಂದೆ ಕೊಡಲ್ಪಟ್ಟ ೦.೦೫ ಸೆಂಟ್ಸ್ ಮನೆ ನಿವೇಶನಕ್ಕೆ ಸ್ಥಳ ಮೌಲ್ಯ ನಿರ್ಧರಿಸಿ ವಸೂಲಿ ಮಾಡುತ್ತಿರುವ ಬಗ್ಗೆ ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಆರ್ ವಿ, ದೇಶಪಾಂಡೆ.—(ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಮನೆ ನಿವೇಶನಗಳನ್ನು (ಸಾಮಾನ್ಯವಾಗಿ ೫ ಸೆಂಟ್ಸ್ ಜಾಗ) ನಿವೇಶನ ರಹಿತರಿಗೆ ಪಾರುಕೆಟ್ಟೆ ಬೆಲೆಯಲ್ಲಿ ವಿತರಣೆ ಮಾಡಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ವಿನಾಯಿತಿ ನೀಡಲಾಗಿದೆ. ಅಲ್ಲದೆ, ವಿಶೇಷ ಪ್ರಕರಣಗಳಲ್ಲಿ ಕೂಡ ಬೆಲೆ ಪರಿಶೀಲಿಸುವ ಅಧಿಕಾರ ಜಿಲ್ಲಾಧಿಕಾರಿಯವರಿಗೆ ಇರುತ್ತದೆ.

ಸದರಿ ನಿವೇಶನಗಳನ್ನು ಭೂ ಮಂಜೂರಾತಿ ನಿಯಮಾನುಸಾರ ಮಂಜೂರು ಮಾಡಿರುವುದರಿಂದ ನಿವೇಶನಗಳ ಬೆಲೆಯನ್ನು ಕೈ ಬಿಡಲು ಕಾನೂನು ಅವಕಾಶವಿರುವುದಿಲ್ಲ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸಚಿವರು ಸಧ್ಯದ ಪರಿಸ್ಥಿತಿಯನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಇಲ್ಲಿರುವ ಪ್ರಶ್ನೆ ಏನೆಂದರೆ ಯಾರು ಭೂರಹಿತ ಬಡವರ್ಗದ ಜನರಿದ್ದಾರೆ, ಅವರಿಗೆ ಸರ್ಕಾರದಿಂದ ಕೇವಲ ೫ ಸೆಂಟ್ಸ್ ಜಾಗವನ್ನು ಮನೆ ನಿವೇಶನಕ್ಕೆ ಕೊಡತಕ್ಕಂಥದು

ಸರ್ಕಾರಿ ಜಮೀನುಗಳು ಇದ್ದರೆ ಮನೆ ನಿವೇಶನಗಳನ್ನಾಗಿ ಮಾಡಿ ಕೊಡತಕ್ಕಂಥಾದ್ದು ನಡೆದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆ ನಿವೇಶನ ಕೊಡುವಾಗ ಎಲ್ಲಾ ವರ್ಗದವರಿಗೆ, ಬಡವರಿಗೆ ಜಮೀನು ಇಲ್ಲದೆ ಇರುವಂತಹ ಜನರಿಗೆ ಉಚಿತವಾಗಿ ಮನೆ ನಿವೇಶನ ಹಿಂದೆ ಕೊಡಲಾಗುತ್ತಿತ್ತು. ಆದರೆ ಮುರಾದೃಷ್ಟವಶಾತ್ ಈ ವರ್ಷ ಮಾತ್ರ ಈ ಮನೆ ನಿವೇಶನಕ್ಕೆ ಬೆಲೆ ನಿರ್ಧರಿಸತಕ್ಕದ್ದನ್ನು ಜಾರಿಗೆ ತಂದಿದ್ದಾರೆ. ಈ ನಿವೇಶನವನ್ನು ಬೇಗೆ ಕೊಡುವಾಗ ಮಾರುಕಟ್ಟೆ ಬೆಲೆ ಕಟ್ಟುತ್ತಾರೆ. ಸರ್ಕಾರ ಬಡವರಿಗೆ ಮನೆ ನಿವೇಶನಗಳನ್ನು ಕೊಡುತ್ತಾರೆ. ಇದನ್ನು ಮಾನ್ಯ ಪಸತಿ ಸಚಿವರು ಸಹ ಒಪ್ಪಿಕೊಳ್ಳುತ್ತಾರೆ. ನಾನು ಕೇಳುವ ಪ್ರಶ್ನೆ ಏನೆಂದರೆ ಸರ್ಕಾರದ ಜಮೀನುಗಳಿಗೆ ಮಾರುಕಟ್ಟೆ ಬೆಲೆ ಕೊಟ್ಟು ಮಾರುಕಟ್ಟೆ ಬೆಲೆ ನಿಗದಿ ಮಾಡಿ ಬಡವರಿಗೆ ನಿವೇಶನ ಹಂಚುವುದು ಉಚಿತವೇ ? ತಮಗೆ ಹಣ ಕೊಟ್ಟು ಮಾರುಕಟ್ಟೆ ಬೆಲೆ ಕೊಟ್ಟು ೫ ಸೆಂಟ್ಸ್ ಜಾಗವನ್ನು ಪರಿಷತ್ ಕಟ್ಟಲು ಓಪನ್ ಮಾರುಕಟ್ಟೆಯಲ್ಲಿ ತೆಗೆದುಕೊಳ್ಳಬಹುದಲ್ಲ. ತಾವು ಹಂಚಿಕೆ ಮಾಡುವ ಜಮೀನು ಏನು ಇದೆ ಅದಕ್ಕೆ ಮಾರುಕಟ್ಟೆ ಬೆಲೆ ಕೊಡುವುದಾದರೆ what difference it makers ? Lands are available in the open market, when your cost of the land is the market value what difference it makes. ಇದು ನನ್ನ ಪ್ರಥಮತಹ ಪ್ರಶ್ನೆಮತ್ತೆತಾಪ್ಪೊಂದು ಮಾತನ್ನು ಹೇಳಿದ್ದಿರಿ ಏನೆಂದರೆ ಕಾನೂನಿನಲ್ಲಿ ಇದಕ್ಕೆತೊಡಕು ಇದೆಎಂದು To some extent I also have gone through Revenue Act ಇಲ್ಲಿ ಬೆಲೆಯನ್ನು ನಿಗದಿಪಡಿಸುವಂತಹ ಕಲಂ ಏನಿದೆ ಅದನ್ನು ಇದುವರೆಗೆ ಯಾರು ಸಹ ಗಣನೆಗೆ ತೆಗೆದುಕೊಂಡಿಲ್ಲ. ಉಚಿತವಾಗಿ ಹರಿಜನ ಮತ್ತು ಗಿರಿಜನರಿಗೆ ಹಿಂದುಳಿದ ವರ್ಗದವರಿಗೆ ಮುಂದುವರಿದ ಜನಾಂಗದವರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಯಾರಿಗೇ ಆಗಲಿ, ಮನೆ ನಿವೇಶನಕ್ಕೆ ಅಗತ್ಯವಾದ ೫ ಸೆಂಟ್ಸ್ ಜಾಗವನ್ನು ಉಚಿತವಾಗಿ ಕೊಡುತ್ತಿದ್ದರು. ನಮ್ಮಲ್ಲಿ ನನಗೆ ಗೊತ್ತಿದ್ದ ಹಾಗೆ ಮಾರುಕಟ್ಟೆ ಬೆಲೆ ಬಿ.ಸಿ. ರೋಡ್‌ನಲ್ಲಿ ಒಂದು ಎಕರೆಗೆ ೩೦ ಲಕ್ಷ ರೂಪಾಯಿಗಳು ಇದೆ ೮ ಲಕ್ಷ ರೂಪಾಯಿಗಳು ಇದೆ. ಆದರೆ ಕನಿಷ್ಠ ಪಕ್ಷ ೨ ಲಕ್ಷ ರೂಪಾಯಿಗಳಿಗಿಂತ ಕಡಿಮೆ ಬೆಲೆಯಲ್ಲಿ ಎಲ್ಲೂ ಜಮೀನು ಸಿಗುವುದಿಲ್ಲ. ಸರ್ಕಾರ ಬಡವರಿಗೆ ಜಮೀನು ಕೊಡುತ್ತೇವೆಂದು ಹೊರಟರೆ ನಿಜವಾಗಿಯೂ ಸಹ ಈ ಕಾರ್ಯಕ್ರಮದ ಉದ್ದೇಶ ಸಫಲವಾಗುವುದಿಲ್ಲ. ಸಂಪೂರ್ಣವಾಗಿ ನೀವು ಸೋಲಂ ಅನುಭವಿಸಬೇಕಾಗುತ್ತದೆ ಎಂದು ನಾನು ಮಾನ್ಯ ಸಚಿವರ ಗಮನಕ್ಕೆ ತಮ್ಮ ಮುಖಾಂತರ ತರ ಬಯಸುತ್ತೇನೆ. ಕಾನೂನು ತೊಡಕು ಇದ್ದರೆ ತಕ್ಷಣದಲ್ಲಿ you bring amendment and solve it. ಕಾನೂನು ತೊಡಕನ್ನು ನೀವು ನಿವಾರಿಸಬೇಕಾಗುತ್ತದೆ. ಇದಕ್ಕೆ ಕಿದ್ದುಪಡಿ ತಂದು ಈ ಸಮಸ್ಯೆಯನ್ನು ನಿವಾರಿಸಬೇಕಾಗುತ್ತದೆ. ಮತ್ತೆ ನಿವೇಶನಕ್ಕೆ ಕೊಡುವಂತಹ ಸರ್ಕಾರಿ ಜಮೀನುಂ ಯಾವುದು ಇದೆ, ಇದನ್ನು ಉಚಿತವಾಗಿ ಕೊಡುವ ಹಾಗೆ ಮಾಡಿ ಆಗ ತಮ್ಮ ಕಾರ್ಯಕ್ರಮ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಈ ಕಾರ್ಯಕ್ರಮ ಅರ್ಥಹೀನವಾಗುತ್ತದೆ ಎಂದು ನಾನು ಸ್ಪಷ್ಟವಾಗಿ ಮಾನ್ಯ ಸಚಿವರಿಗೆ ಹೇಳಿ ಈ ಬಗ್ಗೆ ಮಾನ್ಯ ಸಚಿವರು ಪೂರಕವಾದಂಥ ರಚನಾತ್ಮಕವಾದಂತಹ ಭರವಸೆ ಕೊಡಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದರ ಬಗ್ಗೆ ಸಾಕಷ್ಟು ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ನಾವು ಯಾರಿಗೆ ನಿವೇಷನಗಳನ್ನು ಕೊಟ್ಟಿದ್ದೇವೆಯೋ ಅವು ಭೂ ಮಂಜೂರಾತಿ ಕಾಯಿದೆಯ ಪ್ರಕಾರ ಕೊಡಲಾಗಿದೆ. ನಿವೇಶನಗಳಿಗೆ ಪೂರ್ಕೆಟ್ ವ್ಯಾಲ್ಯೂ ತೆಗೆದುಕೊಳ್ಳುತ್ತಿಲ್ಲ. ಲ್ಯಾಂಡ್ ಗ್ರ್ಯಾಂಟ್ಸ್ ರೂಲ್ಸ್ ಏನು ಇದೆಯೋ ಅದರ ಪ್ರಕಾರ ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗಿನ ಸರ್ಕಾರ ಆಗಲೀ, ಹಿಂದಿನ ಸರ್ಕಾರವಾಗಲೀ, ಲ್ಯಾಂಡ್ ಗ್ರ್ಯಾಂಟ್ಸ್ ರೂಲ್ ಪ್ರಕಾರ ಹಣವನ್ನು ವಸೂಲಿ ಮಾಡಲೇ ಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರುಗಳಿಗೆ ನಿವೇಶಗಳನ್ನು ರಿಯಾಯಿತಿ ದರದಲ್ಲಿ ಕೊಡಲಾಗಿದೆ. ವಿಶೇಷವಾದ ಪ್ರಕರಣಗಳಲ್ಲಿ ಕೆಲವರುಗಳಿಗೆ ಉಚಿತವಾಗಿ ನಿವೇಶನಗಳನ್ನು ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ನಾವು ತಿಳಿಸಿದ್ದೇವೆ. ಮಾನ್ಯ ಸದಸ್ಯರು ಹೇಳುವ ಹಾಗೆ ಎಲ್ಲರಿಗೂ ಫ್ರೀಯಾಗಿ ನಿವೇಶನಗಳನ್ನು ಕೊಡಲಿಕ್ಕೆ ಅವಕಾಶ ಇಲ್ಲ. ಹರಿಜನ ಮತ್ತು ಗಿರಿಜನರಿಗೆ ಮಾತ್ರ ಫ್ರೀಯಾಗಿ ನಿವೇಶನಗಳನ್ನು ಕೊಡಲಿಕ್ಕೆ ಅವಕಾಶ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೇ ಸೌತ್ ಕೆನರಾದಲ್ಲಿ ನಿವೇಶನಗಳ ಬೆಲೆ ಬಹಳ ಕಾಸ್ಟ್‌ಲಿಯಾಗುತ್ತದೆ, ಆದ್ದರಿಂದ ಎಲ್ಲರಿಗೂ ಉಚಿತವಾಗಿ ನಿವೇಶನಗಳನ್ನು ಕೊಡುವುದಕ್ಕಾಗುವುದಿಲ್ಲ. ಲ್ಯಾಂಡ್ ಗ್ರ್ಯಾಂಟ್ಸ್ ರೂಲ್ಸ್ ಪ್ರಕಾರ ನಾವು ಹಣವನ್ನು ವಸೂಲಿ ಮಾಡಲೇಬೇಕಾಗುತ್ತದೆ.

ಶ್ರೀ ಬಿ. ಎ. ಉಮರಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆ ನಿವೇಶನಕ್ಕಾಗಿ ೫ ಸೆಂಟ್ಸ್ ಜಾಗವನ್ನು ಕೇಳುವವರು ಒಡವರೇ ಆಗಿರುತ್ತಾರೆ. ಶ್ರೀಮಂತರು ೫ ಸೆಂಟ್ಸ್ ನಿವೇಶನವನ್ನು ಕೇಳುವುದಿಲ್ಲ. ವಿಶೇಷ ಪ್ರಕರಣಗಳಲ್ಲಿ ನಿವೇಶನಗಳನ್ನು ಉಚಿತವಾಗಿ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆಯೆಂದು ತಾವು ಹೇಳಿದ್ದೀರಿ. ವಿಶೇಷ ಪ್ರಕರಣಗಳು ಎಂದರೆ ಯಾವಾಗ ? ಯಾರಿಗೆ ? ಎಂದು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ವಿಶೇಷ ಪ್ರಕರಣ ಎಂದರೆ, ಯಾರಾದರು ಕಡು ಬಡವರಿದ್ದರೆ ಅವರುಗಳಿಗೆ ಉಚಿತವಾಗಿ ನಿವೇಶನ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಬಿ. ಎ. ಉಮರಬ್ಬ.—ನಮ್ಮ ಜಿಲ್ಲೆಯಲ್ಲಿ ಆರ್ಥಿಕವಾಗಿ ಮುಂದುವರಿದಿರುವವರು ಕೇವಲ ೫ ಸೆಂಟ್ಸ್ ಭೂಮಿಗಾಗಿ ಯಾರೂ ಕಾಯುವುದಿಲ್ಲ. ಆದ್ದರಿಂದ ೫ ಸೆಂಟ್ಸ್ ನಿವೇಶನಕ್ಕಾಗಿ ಯಾರು ಅರ್ಜಿ ಹಾಕಿಕೊಳ್ಳುತ್ತಾರೋ, ಅವರುಗಳಿಗೆ ಉಚಿತ ನಿವೇಶನವನ್ನು ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ತಿಳಿಸಬೇಕೆಂದು ನಾನು ಕೇಳುತ್ತೇನೆ. ಬಡವರ ಹತ್ತಿರ ನಿವೇಶನದ ಶುಲ್ಕವೆಂದು ಹಣವನ್ನು ವಸೂಲಿ ಮಾಡಬಾರದು.

ಶ್ರೀ ಆರ್. ವಿ. ದೇಶಪಾಂಡೆ.—ಲ್ಯಾಂಡ್ ಗ್ರ್ಯಾಂಟ್ಸ್ ರೂಲ್ಸ್ ಪ್ರಕಾರ ನಾವು ನಿವೇಶನದ ಶುಲ್ಕವನ್ನು ಪಡೆಯಲೇಬೇಕಾಗುತ್ತದೆ. ಯಾರು ಕಡು ಬಡವರಿದ್ದಾರೋ ಅಂಥವರುಗಳಿಗೆ ಮಾತ್ರ ಉಚಿತವಾಗಿ ನಿವೇಶನಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಎ. ಉಮರಬ್ಬ.—ಕಡು ಬಡವರು ಎಂದು ಯಾವ ಆಧಾರದ ಮೇಲೆ ನೀವು ಜನರುಗಳನ್ನು ಗುರುತಿಸುತ್ತೀರಿ ?

ಶ್ರೀ ಆರ್. ವಿ. ದೇಶಪಾಂಡೆ.—ಹಸಿರು ಕಾರ್ಡ್ ಇದ್ದರೆ ಅವರು ಕಡು ಬಡವರೆಂದು ನಾವು ಗುರುತಿಸುತ್ತೇವೆ.

ಶ್ರೀ ಬಿ. ಎ. ಉಮರಬ್ಬ.—ಹಸಿರು ಕಾರ್ಡ್ ಇರುವವರಿಗೆಲ್ಲಾ ನೀವು ಉಚಿತವಾಗಿ ನಿವೇಶನಗಳನ್ನು ಕೊಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಹಸಿರು ಕಾರ್ಡ್ ಇರುವವರಿಗೆಲ್ಲಾ ಉಚಿತವಾಗಿ ನಿವೇಶನಗಳನ್ನು ಕೊಡಬೇಕಾದರೆ, ಆದರ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎ. ಉಮರಬ್ಬ.—ಹಸಿರು ಕಾರ್ಡ್ ಇದ್ದರೆ ಅವರು ಕಡು ಬಡವರೆಂದು ತಾವು ಹೇಳುತ್ತೀರಾ. ಹಾಗಾದರ ಹಸಿರು ಕಾರ್ಡ್ ಇದ್ದರೆ ಅವರುಗಳಿಗೆ ಉಚಿತವಾಗಿ ನಿವೇಶನ ಏಕೆ ಕೊಡುವುದಿಲ್ಲ ಅದನ್ನು ಪರಿಶೀಲನೆ ಮಾಡುವ ವಿಚಾರ ಏನಿದೆ ?

ಶ್ರೀ ಆರ್ ವಿ. ದೇಶಪಾಂಡೆ.—ನಾನು ಈಗಾಗಲೇ ಹೇಳಿದ್ದೇನೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ನಾವು ಶುಲ್ಕವನ್ನು ವಸೂಲಿ ಮಾಡಲೇಬೇಕಾಗುತ್ತದೆ. ಲ್ಯಾಂಡ್ ಗ್ರ್ಯಾಂಟ್ಸ್ ರೂಲ್ಸ್ ಪ್ರಕಾರ ಶುಲ್ಕವನ್ನು ಮಾಡದೇ ಇದ್ದರೆ ಅದು ಕಾನೂನಿಗೆ ವಿರುದ್ಧವಾಗುತ್ತದೆ. ಹಣವನ್ನು ವಸೂಲಿ ಮಾಡದೇ ಉಚಿತವಾಗಿ ಎಲ್ಲರಿಗೂ ನಿವೇಶನ ಕೊಡಬೇಕೆಂದರೆ, ಆಗ ಈ ರೂಲ್ಸ್‌ಗೆ ಅಮೆಂಡ್‌ಮೆಂಟ್‌ನ್ನು ತರಬೇಕಾಗುತ್ತದೆ.

ಶ್ರೀ ಬಿ. ಎ. ಉಮರಬ್ಬ.... ವಿಶೇಷ ಪ್ರಕರಣಗಳಲ್ಲಿ ಕಡು ಬಡವರಿಗೆ ನಿವೇಶನಗಳನ್ನು ಉಚಿತವಾಗಿ ಹಂಚುತ್ತೇವೆಂದು ಹೇಳುತ್ತೀರಿ. ಕಡು ಬಡವರನ್ನು ಹೇಗೆ ಗುರುತಿಸುತ್ತೀರಿ ಎಂದರೆ, ಹಸಿರು ಕಾರ್ಡ್ ಇದ್ದರೆ ಸಾಕು ಎನ್ನುತ್ತೀರಿ. ಆದರೆ ಹಸಿರು ಕಾರ್ಡ್ ಇದ್ದವರಿಗೆಲ್ಲಾ ಉಚಿತವಾಗಿ ನಿವೇಶನ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಇದರ ಬಗ್ಗೆ ಸ್ಪಷ್ಟವಾಗಿ ತಾವು ಉತ್ತರ ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಹಸಿರು ಕಾರ್ಡ್ ಹೊಂದಿರುವವರಿಗೆ ಉಚಿತ ನಿವೇಶನಗಳನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಕಡು ಬಡವರು ಎಂದರೆ, ಜೀವನ ನಿರ್ವಹಣೆ ಮಾಡುವುದಕ್ಕೆ ಬಹಳ ಕಷ್ಟವಾಗಿರುವವರಿಗೆ ಉಚಿತವಾಗಿ ನಿವೇಶನಗಳನ್ನು ಕೊಡಲಾಗುತ್ತದೆ.

ಅಧ್ಯಕ್ಷರು.—ಉಮರಬ್ಬ ಅವರೇ, ಈಗಾಗಲೇ ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಮಂತ್ರಿಗಳು ಉತ್ತರ ಹೇಳಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎ. ಉಮರಬ್ಬ —ಮಾನ್ಯ ಅಧ್ಯಕ್ಷರೇ ನನಗೆ ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. I am confident Mr. Speaker that you have understood the problem. My problem is that the site is being allotted to the people who are very poor. My another demand is that the sites are to be allotted to them free of cost. ವಿಶೇಷ ಎನ್ನುವುದು ಹಸಿರು ಕಾರ್ಡ್ ಆದರೆ, ಅಂಥ ಹಸಿರು ಕಾರ್ಡ್ ಹೊಂದಿದವರಿಗಾದರೂ ಆ ಜಾಗವನ್ನು ಕೊಡುತ್ತೀರಾ ?

SRI R. V. DESHPANDE.—I have already stated that this has been granted under land grant rules. For SCs and Sts, yes we have given concessions. ಡಿ. ಸಿ. ಗೆ. ವಿಶೇಷವಾದ ಅಧಿಕಾರವಿದೆ. ಅದನ್ನು ನಾನು ಈಗಾಗಲೇ ಹೇಳಿದ್ದೇನೆ. They can approach D. C. ನಾನು ಡಿ. ಸಿ. ಯವರಿಗೆ ಹೇಳಿ ಈ ಹಸಿರು ಕಾರ್ಡ್ ಹೊಂದಿದವರ ಬಗ್ಗೆ ಈ ಕುರಿತು ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. ಇದಕ್ಕಿಂತ ಹೆಚ್ಚು ನಾನು ಏನು ಹೇಳುವುದಕ್ಕೆ ಸಾಧ್ಯವಿದೆ ?Can I go back to the land grant rules and tell something else ?

ಅಧ್ಯಕ್ಷರು.—ಸೊರಕೆಯವರೇ ತಾವು ಕೇಳಿ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ಇದು ಬರೀ ನಗರಾಭಿವೃದ್ಧಿ ಮಂತ್ರಿಯವರಿಗೆ ಮಾತ್ರ ಸೀಮಿತವಾದ ಪ್ರಶ್ನೆಯಲ್ಲ, ಈ ಐದು ಸೆಂಟ್ಸ್ ಜಾಗವನ್ನು ಮನೆ ನಿವೇಶನ ಇಲ್ಲದ ವರಿಗೆ ಕೊಡುವಂಥ ಒಂದು ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಲ್ಲಿ ಸಾಧಾರಣ ೫–೧೦ ಎಕರೆ ಲ್ಯಾಂಡ್ ಕೊಡುವಂಥವುತು ಅದಕ್ಕೆ ಕಾಯಿದೆ ಮುಖಾಂತರ ದುಡ್ಡು ಕೊಡುವಂಥ ಪರಿಸ್ಥಿತಿಯೂ ಬರುವುದಿಲ್ಲ ಆದರೆ ಕೆವಲ ಐದು ಸೆಂಟ್ಸ್ ಅದು ಕೂಡ ಕಡುಬಡವರಿಗೆ ಯಾರಿಗೆ ನಿವೇಶನ ಇಲ್ಲವೋ ಅಂಥಹ ವರಿಗೆ ಸಿಕ್ಕಿರುವುದಕ್ಕೆ ತಾವುಗಳು ಹಣವನ್ನು ವಸೂಲಿ ಮಾಡುತ್ತಿದ್ದೀರಿ, ಅದು ಸರಿಯಲ್ಲ. ಆದನ್ನು ರಿಯಾಯತಿ ಆಗಿ ಕೊಟ್ಟಲ್ಲಿ ಆ ಬಡವರಿಗೆ ಒಂದು ಸಮಾಧಾನ ಬರುತ್ತದೆ. ತನ್ನ ಹೆಸರಿನಲ್ಲಿ ಐದು ಸೆಂಟ್ಸ್ ಜಾಗವಾದರೂ ಇರಲಿ ಎಂಬ ಆಶೆ ಎಲ್ಲರಿಗೂ ಇರುತ್ತದೆ. ಒಟ್ಟಿನಲ್ಲಿ ಯಾವ ಬಡವರಿಗೆ ನಿವೇಶನಗಳನ್ನು ಹಂಚಿದ್ದೀರೋ ಅದನ್ನು ಫ್ರೀ ಆಫ್‌ಕಾಸ್ಟ್ ಕೊಡಬೇಕೆಂದು ತಮ್ಮ ಮೂಲಕ ಸರಕಾರ ದವರನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—There are two aspects. ಈಗ ಲ್ಯಾಂಡ್‌ಗ್ರ್ಯಾಂಟ್ ರೂಲ್ಸ್ ಪ್ರಕಾರ ಈ ಭೂಮಿಯನ್ನು ಮಂಜೂರು ಮಾಡುತ್ತಾರೆ. ಅದಕ್ಕೆ ರೂಲ್ಸ್ ಪ್ರಕಾರವೇ ನಾವು ವಸೂಲಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಕಡುಬಡವರು ಯಾರಿದ್ದಾರೆ, ಅವರಿಗೆ ಇಂಥ ಭೂಮಿಯನ್ನು ಹಂಚುವುದಕ್ಕೆ ಬೇರೆ ಯೋಜನೆಗಳು ಇವೆ. ಅಂಥ ಭೂಮಿಗೆ ಅರ್ಹರಾದವರು ಅರ್ಜಿ ಹಾಕಿದರೆ ಅವರಿಗೆ ಸಿಗುತ್ತದೆ. If he comes under land grant rules, ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಇಂತಹವರಿಗೆ ಮಂಜೂರು ಮಾಡಬೇಕಾಗುತ್ತದೆ.

SRI B. A. UMARABBA.—Whather you are speaking about urban areas or rural areas. Are you representing Revenue Minister ?

SRI R. V. DESHPANDE.—I am not representing Revenue Minister.

ಶ್ರೀ ಬಿ. ಎ, ಉಮರಬ್ಬ.—ಅಧ್ಯಕ್ಷರೇ...

ಅಧ್ಯಕ್ಷರು.— ಈ ರೀತಿಯಾಗಿ ತಾವುಗಳು ರೂಲ್ಸ್‌ರೆಗ್ಯುಲೇಶನ್ಸನ್ನು ಗಾಳಿಗೆ ತೂರಿದರೆ ಹೇಗೆ ? ನಾನು ನಾಲ್ಕು ಸಾರಿ ನಿಮಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇನೆ. ದಯವಿಟ್ಟು ತಾವು ಕುಳಿತು ಕೊಳ್ಳಬೇಕು, ಇನ್ನೂ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ. ಸದಸ್ಯರಾಗಿ ಬಂದು ನಾಲ್ಕು ವರ್ಷಗಳು ಆಗುತ್ತಾ ಬಂದರೂ ನಾನು ನಿಮಗೆ ನಿಯಮಗಳನ್ನು ಕಲಿಸಿಕೊಡಬೇಕೇ ?

ಶ್ರೀ ವಿನಯಕುಮಾರ ಸೊರಕೆ.—ಈ ಐದು ಸೆಂಟ್ಸ್ ಜಾಗದಲ್ಲಿ ೨೦–೩೦ ವರ್ಷಗಳಿಂದ ಕುಳಿತುಕೊಂಡಿರತಕ್ಕಂಥ ಜನರೂ ಕೂಡ ಇದ್ದಾರೆ. ಅವರಿಗೆ ಈ ಜಾಗವನ್ನು ಕೊಟ್ಟಂಥ ಸಂದರ್ಭದಲ್ಲಿ

ಆದಕ್ಕೆ ಹಣ ವಸೂಲಿ ಮಾಡುತ್ತಾರೆ ಎಂದು ಕಲ್ಪನೆ ಇರಲಿಲ್ಲ. ಅವರು ಅಲ್ಲಿ ೧೦–೨೦ ವರ್ಷಗಳಿಂದ ಅದೇ ಜಾಗದಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಾ ಕುಳಿತಂಥ ಜನರೂ ಕೂಡ ಇದ್ದಾರೆ. ಈಗ ಅವರಿಂದ ಕೂಡ ಹಣವನ್ನು ವಸೂಲಿ ಮಾಡತಕ್ಕಂಥ ಒಂದು ಅವಕಾಶ ಆಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಸ್ವಲ್ಪ ಹೆಚ್ಚಿಗೆ ವಸೂಲಿ ಮಾಡುವುದಕ್ಕೆ ಆಗುತ್ತದೆ. ಅದೇ ಪುತ್ತೂರು ತಾಲ್ಲೂಕಿನಲ್ಲಿ ಸ್ವಲ್ಪ ಕಡಿಮೆ ಆಗುತ್ತದೆ. ಈ ಒಂದು ಕಾಯಿದೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಂದೇ ರೀತಿಯಲ್ಲಿ ವಸೂಲಿ ಆಗುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಾಗಲೀ, ಪಟ್ಟಣಪ್ರದೇಶಗಳಲ್ಲಾಗಲೀ, ಯೋಜನೆಗಳ ಪ್ರಕಾರ ಎಲ್ಲಿ ಕಡುಬಡವರಿಗೆ ನಿವೇಶನಗಳನ್ನು ಹಂಚುತ್ತೇವೆ ಅಲ್ಲಿ ಪುಕ್ಕಟೆಯಾಗಿ ಕೊಡುವುದಕ್ಕೆ ಅವಕಾಶ ಇದೆ. ಆದರೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ನಲ್ಲಿ ಹರಿಜನ ಗಿರಿಜನರಿಗೆ ಮಾತ್ರ ರಿಯಾಯಿತಿ ಇದೆ. ಬೇರೆ ಕೇಸ್‌ನಲ್ಲಿ ಆದರೆ ಬರೆ ನಿವೇಶನ ಇದ್ದಾಗ ಅದು ಬರುವುದಿಲ್ಲ.

ಶ್ರೀ ವಿನಯಕುಮಾರ ಸೊರಕೆ.—ತಾವುಗಳು ಇಲ್ಲಿ ಜಿಲ್ಲಾಧಿಕಾರಿಯವರ ಪ್ರಶ್ನೆ ಎತ್ತಿದ್ದೀರಿ ಈ ಐದು ಸೆಂಟ್ಸ್ ಜಾಗಕ್ಕೆ ಹಣ ಕೊಡುವ ವಿಚಾರದಲ್ಲಿ ಡಿ.ಸಿ.ಯವರ ಗಮನಕ್ಕೆ ಬರುವುದಿಲ್ಲ. ಅದು ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಶೀಲ್ದಾರರ ಹಂತದಲ್ಲಿ ಮುಗಿಯುತ್ತದೆ. ಇದನ್ನು ಜಿಲ್ಲಾಧಿಕಾರಿಯವರ ಗಮನಕ್ಕೆ ತರುತ್ತೇವೆ ಎಂದು ತಾವು ಹೇಳಿದುದು ಅಷ್ಟು ಪ್ರಯೋಜನಕಾರಿಯಾಗುವುದಿಲ್ಲ. ಆದುದರಿಂದ ತಾವುಗಳು ಸ್ಪಷ್ಟವಾಗಿ ರೆವಿನ್ಯೂ ಅಧಿಕಾರಿಗಳಿಗೆ ನಿರ್ದೇಶನವನ್ನು ಈ ಕುರಿತು ನೀಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಗ್ರಾಮಾಂತರ ಪ್ರದೇಶಗಳಲ್ಲಿ ನಿವೇಶನಗಳನ್ನು ಹಂಚುವ ಅಧಿಕಾರವನ್ನು ಮುಂಡಳಪಂಚಾಯತ್‌ನವರಿಗೆ ಕೊಟ್ಟಿದ್ದೇವೆ, ಯಾರಿಗೆ ನಿವೇಶನ ಇಲ್ಲ, ಅಂಥವರಿಗೆ ಯಾವ ನಿಯಮಗಳ ಪ್ರಕಾರ ನಿವೇಶನವನ್ನು ಹಂಚಬೇಕು ಎಂದು ನೋಡಿಕೊಂಡು, ಅದರಂತೆ ಹಂಚುತ್ತಾರೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ನಲ್ಲಿ ಏನು ಬಂದಿದೆ, ಆ ಪ್ರಕಾರ ನಿವೇಶನ ಇಲ್ಲದವರಿಗೆ ಅವರು ಹಂಚುತ್ತಾರೆ.

ಅಧ್ಯಕ್ಷರು.—ಈಗ ಜಿ.ಎಸ್. ಆಚಾರ್‌ರವರು ಮಾತನಾಡಬಹುದು.

ಶ್ರೀ ಜಿ. ಎಸ್. ಆಚಾರ್.—ಯಾವ ವಿಚಾರದ ಬಗ್ಗೆ ಸ್ವಾಮಿ ?

ಅಧ್ಯಕ್ಷರು.—ತಮಗೇ ಗೊತ್ತಿಲ್ಲವೇ ? ಆಯಿತು ಕುಳಿತುಕೊಳ್ಳಿ, ಮಾನ್ಯ ಇದಿನಬ್ಬರವರು ಮಾತನಾಡಬಹುದು.

ಶ್ರೀ ಬಿ. ಎಂ. ಇದಿನಬ್ಬ.—ಯಾವ ವಿಷಯದ ಬಗ್ಗೆ ನಾನು ಮಾತನಾಡಬೇಕಾಗಿದೆ ?

ಅಧ್ಯಕ್ಷರು.—ನಿಮಗೂ ಗೊತ್ತಿಲ್ಲವೆ ? ಗಮನ ಸೆಳೆಯುವ ಸೂಚನೆಯಲ್ಲಿ ನೀವು ಐದು ಜನರು ಸಹಿ ಹಾಕಿದ್ದೀರಿ.

ಶ್ರೀ ಬಿ. ಎಂ. ಇದಿನಬ್ಬ.—ಕ್ಷಮಿಸಬೇಕು. ಮಾನ್ಯ ಅಧ್ಯಕ್ಷರೆ, ಈ ಐದು ಸೆಂಟ್ಸ್ ಭೂಮಿಯನ್ನು ಏನು ಕೊಟ್ಟಿದ್ದಾರೆ, ಅದರ ಬಗ್ಗೆ ಒಂದು ವರ್ಷಕ್ಕಿಂತ ಮೊದಲು ಯಾವ ಸುದ್ದಿ ಕೂಡ ಇರಲಿಲ್ಲ. ಈಗ ಅದಕ್ಕೆ ಹಣ ಕೊಡಬೇಕೆಂದು ಶುರು ಆಗಿದೆ. ಈ ಬಗ್ಗೆ ಅಧಿಕಾರಿಗಳು ಸಂಬಂಧಪಟ್ಟವರ ಕುತ್ತಿಗೆ ಹಿಡಿಯಲಿಕ್ಕೆ ಶುರು ಮಾಡಿದ್ದಾರೆ. ಈ ಭೂಮಿಯನ್ನು ಕೊಟ್ಟಂಥ ಉದ್ದೇಶ ಏನೆಂದರೆ, ಯಾರು ಬಡವರಿದ್ದಾರೆ, ಯಾರಿಗೆ ನಿವೇಶನ ಇಲ್ಲ, ಯಾರಿಗೆ ನಿವೇಶನ ಕೊಂಡುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಅಂಥವರನ್ನು ಗುರುತಿಸಿ ಕೊಟ್ಟಿದ್ದೀರಿ. ಅದು ಅವರ ವಾಸಕ್ಕೋಸ್ಕರವಾಗಿ ಕೊಟ್ಟಿದ್ದೀರಿ. ಅವರ ಸುಖ-ಶಾಂತಿಗೆಂದು ಅಲ್ಲ. ಶ್ರೀಮಂತರಾದವರಿಗೆ ಎಷ್ಟು ಭೂಮಿ ಇದ್ದರೂ ಸಾಕಾಗುವುದಿಲ್ಲ. ಆದುದರಿಂದ ಈ ಕಡುಬಡವರಿಗೆ ಕೊಟ್ಟ ಭೂಮಿಯ ಬಗ್ಗೆ ಹಣ ವಸೂಲು ಮಾಡುವುದನ್ನು ನಿಲ್ಲಿಸಿ ಅವರಿಗೆ ರಿಯಾಯಿತಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಕಡು ಬಡುವರಿಗೆ ಫ್ರೀಯಾಗಿ ನಿವೇಶನ ಕೊಡಬೇಕೆಂಬ ವಾದವನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಅದಕ್ಕೆ ನಾವು ಲ್ಯಾಂಡ್

ಗ್ರ್ಯಾಂಟ್ ರೂಲ್ಸನ್ನು ತಿದ್ದುಪಡಿ ಮಾಡಬೇಕಾಗುತ್ತದೆ. Suppose I have to give it under land grant rules, the act have to be amended.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ಈ ಐದು ಸೆಂಟ್ಸ್ ವರೆಗೆ ಜಾಗಗಳನ್ನು ಕೊಟ್ಟಿರುವುದು ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ. ಇದನ್ನು ಹೊಂದಿರುವವರಲ್ಲಿ: ಕೃಷಿ ಕಾರ್ಮಿಕರು, ಕಡು ಬಡವರು ಯಾರಿದ್ದಾರೆ, ಅವರು ಅರ್ಜಿಯನ್ನು ಸಲ್ಲಿಸಿ, ರೆವಿನ್ಯೂ ಇಲಾಖೆಯವರಿಂದ ಮನೆ ನಿವೇಶನವನ್ನು ಅಲಾಟ್ ಮಾಡಿಸಿಕೊಂಡಿದ್ದಾಗಿರುತ್ತದೆ. ಆಗ ಈ ಭೂಮಿಯನ್ನು ಉಚಿತವಾಗಿ ಕೊಟ್ಟಿದ್ದಾರೆಯೇ ಹೊರತು, ಅದಕ್ಕೆ ಹಣ ಕೊಡುವ ಪದ್ಧತಿಯು ಇಷ್ಟರವರೆಗೆ ಇರಲಿಲ್ಲ ಮಾನ್ಯ ಇದಿನಬ್ಬನವರು ಹೇಳಿದ ಹಾಗೆ, ಒಂದು ವರ್ಷದಿಂದೀಚೆಗೆ ಈ ಜಾಗದ ಬಗ್ಗೆ ಹಣ ವಸೂಲಿ ಮಾಡುವಂತಾದ್ದು ನಡೆಯುತ್ತಾ ಇದೆ. ಆದ್ದೊತ್ತು ಇದು ಉಚಿತವಾಗಿ ನೀಡಿದ ನಿವೇಶನ ; ಇದಕ್ಕೆ ಹಣ ತೆಗೆದುಕೊಳ್ಳಬಾರದು, ಎಂಬ ಆದೇಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಈ ನಿವೇಶನಗಳಿಗೆ ಹಣ ವಸೂಲಿ ಮಾಡಬೇಕಾಗುತ್ತದೆ. ಒಂದು ವೇಳೆ ಮಾನ್ಯ ಸದಸ್ಯರುಗಳ ಸೂಚನೆಯನ್ನು ಒಪ್ಪಿಕೊಳ್ಳಬೇಕಾದರೆ ಆ ಕಾನೂನಿಗೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಆದುದರಿಂದ ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೆ, ಈ ಕುರಿತು ನಮ್ಮ ಕಾಳಜಿ ಏನೆಂದರೆ, ಭೂರಹಿತರಿಗೆ ಮಾರುಕಟ್ಟೆ ಬೆಲೆಯಲ್ಲಿ ನಿವೇಶನವನ್ನು ವಿತರಣೆ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಬೆಲೆ ನಿರ್ಧರಿಸಿರುತ್ತಾರೆ. ಆದರೆ ನಿಜವಾಗಿಯೂ ಮಾರುಕಟ್ಟೆ ಬೆಲೆಯಲ್ಲಿ ವೈಪರೀತ್ಯ ಇರುವುದಿಲ್ಲ. ಇದು ಕೆಲವು ಗೊಂದಲಕ್ಕೆ ಕಾರಣವಾಗಿರುತ್ತವೆ. ಡಿ.ಸಿ.ಯವರೆಗೆ ನಾವು ಏನು ಅಧಿಕಾರವನ್ನು ಕೊಟ್ಟಿರುತ್ತೀರಿ, ಅದರ ಮೂಲಕ ರೆವಿನ್ಯೂ ಅಧಿಕಾರಿಗಳು ನಿರ್ಣಯ ಮಾಡುವಾಗ ತೊಂದರೆಯಾಗುತ್ತದೆ. ಎರಡನೇಯದಾಗಿ ಈ ಭೂಮಿಯನ್ನು ಭೂರಹಿತರಿಗೆ ಕೊಡಬೇಕೆಂದು ಹೇಳಿದ್ದೀರಿ. ಆದರೆ ಮಾನ್ಯ ಬಸವರಾಜ್ ಅವರ ಕ್ಷೇತ್ರದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಕಡುಬಡವರಿಗೆ ಕೊಡತಕ್ಕಂಥ ಬೆಲೆ ಯಾವುದಿದೆ, ಅದಕ್ಕಿಂತ ಕಡಿಮೆ ಬೆಲೆಯಲ್ಲಿ ಕೊಟ್ಟಿದ್ದಾರೆ. ಇಂಥ ಅವ್ಯವಹಾರ ಆಗಬಾರದು. ಯಾರು ಕಡು ಬಡವರಿದ್ದಾರೆ ಅವರಿಗೆ ಮಾತ್ರ ಇಂಥ ಭೂಮಿ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ, ನಾನು ಯಾರು ಕೇಳಿದರೂ ಕೂಡ ಇದೇ ಉತ್ತರವನ್ನು ಕೊಡಬೇಕಾಗುತ್ತದೆ. ಕಡು ಬಡವರಿಗೆ ಉಚಿತವಾಗಿ ನಿವೇಶನವನ್ನು ಕೊಡುವಂಥ ಮನಸ್ಸು ನನಗೂ ಕೂಡ ಇದೆ. ಆದರೆ ಆ ಬಗ್ಗೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ, ಆದರ ಬಗ್ಗೆ ಸರಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಎ. ಉಮರಬ್ಬ.—ಹಾಗಾದರೆ ತಾವುಗಳು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರುಗಳ ಒಂದು ಮೀಟಿಂಗ್ ಕರೆದು ಇರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಒಂದು ನಿರ್ಣಯಕ್ಕೆ ಬರುವ ವ್ಯವಸ್ಥೆಯನ್ನು ಮಾಡಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದು ಮೀಟಿಂಗ್ ಕರೆದು, ಆ ಬಗ್ಗೆ ವಿವರವಾದ ಚರ್ಚೆ ಮಾಡಿ ಪರಿಶೀಲನೆ ಮಾಡಿ,

ಶ್ರೀ ಆರ್. ವಿ. ದೇಶಪಾಂಡೆ.—ಆಯಿತು. ಹಾಗೆಯೇ ಮಾಡುತ್ತೇನೆ.

೨) ಮಂಗಳೂರು ಹಳೆ ಬಂದರಿನ ಯೋಜನೆ ಮತ್ತು ಇನ್ನಿತರ ಮೀನುಗಾರಿಕಾ ಬಂದರುಗಳ ಅಭಿವೃದ್ಧಿ ಕುರಿತು.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಹಳೆ ಬಂದರಿನ ಯೋಜನೆ ಮತ್ತು ಇನ್ನಿತರ ಮೀನುಗಾರಿಕೆ ಬಂದರುಗಳ ಅಭಿವೃದ್ಧಿ ಬಗ್ಗೆ ತೋರಿಸಿದ ನಿರ್ಲಕ್ಷ್ಯತನದಿಂದ ಅನೇಕ ಮೀನುಗಾರಿಕೆ ದೋಣಿಗಳು ಮುಳುಗಿದ್ದು ಪ್ರಾಣ ಹಾನಿ ಮತ್ತು ಆಸ್ತಿಗೆ ಉಂಟಾಗಿರುವ ನಷ್ಟದ ಬಗ್ಗೆ